# 2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 38

## ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2020

### ಪ್ರಕರಣಗಳ ಪಟ್ಟಿ

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
4. ಪದಾವಧಿ ಮತ್ತು ಸೇವಾ ಷರತ್ತುಗಳು
5. ಸದಸ್ಯತ್ವದ ಪದಕ್ಕೆ ಅನರ್ಹತೆಗಳು
6. ಸರ್ಕಾರೇತರ ಸದಸ್ಯನನ್ನು ತೆಗೆದುಹಾಕುವುದು
7. ಮರುನೇಮಕಾತಿಗೆ ಅರ್ಹತೆ
8. ಪ್ರಾಧಿಕಾರದ ಅಧಿಕಾರಗಳು
9. ಪ್ರಾಧಿಕಾರದ ಉಪ ಸಮಿತಿಗಳು
10. ಆಯುಕ್ತನ ನೇಮಕಾತಿ
11. ಆಯುಕ್ತನ ಅಧಿಕಾರಗಳು ಮತ್ತು ಕರ್ತವ್ಯಗಳು
12. ಪ್ರಾಧಿಕಾರದ ನೌಕರರು
13. ಪ್ರಾಧಿಕಾರದ ಅಡಿಯಲ್ಲಿನ ಸೇವೆಗಳಿಗಾಗಿ ಸಾಮಾನ್ಯ ಅನರ್ಹತೆಗಳು
14. ಪ್ರಾಧಿಕಾರದ ಸಭೆಗಳು
15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಸಿಂಧುವಾದುದೆಂದು ಪೂರ್ವಭಾವನೆ ಮಾಡುವುದು
16. ಟಿಪ್ಪಣಿಯನ್ನು ಸುತ್ತಿಸುವ ಮೂಲಕ ಪ್ರಾಧಿಕಾರದ ತೀರ್ಮಾನಗಳು
17. ಕೆಲವು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷನ ಅಧಿಕಾರ
18. ಸರ್ವಜ್ಞ ಕ್ಷೇತ್ರದಲ್ಲಿನ ಪಾರಂಪರಿಕ ತಾಣಗಳು
19. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ
20. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು
21. ಸರ್ವಜ್ಞ ಕ್ಷೇತ್ರದ ನಿರ್ವಹಣೆ
22. ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ
23. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರದ ಆವರಣಗಳಿಗೆ ಅನ್ವಯಿಸುವುದು
24. ಪ್ರಾಧಿಕಾರದ ಅನುಮತಿ ಇಲ್ಲದೆ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಅಭಿವೃದ್ಧಿಯನ್ನು ಕೈಗೊಳ್ಳತಕ್ಕದ್ದಲ್ಲ
25. ಪ್ರಾಧಿಕಾರವು ಪ್ರವಾಸೋದ್ಯಮಕ್ಕೆ ಮತ್ತು ಯಾತ್ರೆಗೆ ಉತ್ತೇಜನವನ್ನು ನೀಡುವುದು
26. ಅಧಿಕಾರಗಳ ಪ್ರತ್ಯಾಯೋಜನೆ
27. ಪ್ರಾಧಿಕಾರದ ನಿಧಿ
28. ನಿಧಿಯ ಬಳಕೆ
29. ರಾಜ್ಯ ಸರ್ಕಾರದಿಂದ ಅನುದಾನ
30. ಪ್ರಾಧಿಕಾರದ ಆಯವ್ಯಯ

31. [ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ]
32. [ವರದಿಗಳು]
33. [ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಭೂಮಿಯನ್ನು ಮಾರಾಟ ಮಾಡಕೂಡದು]
34. [ಕೆಲವು ವ್ಯಕ್ತಿಗಳು ಲೋಕನೌಕರರಾಗಿರತಕ್ಕದ್ದು]
35. [ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ]
36. [ಕರ್ತವ್ಯ ನಿರ್ವಹಣೆಯಲ್ಲಿ ಲೋಪ]
37. [ಪ್ರಾಧಿಕಾರದ ವಿಘಟನೆ]
38. [ರಾಜ್ಯ ಸರ್ಕಾರದಿಂದ ನಿಯಂತ್ರಣ]
39. [ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ]
40. [ತೊಂದರೆಗಳ ನಿವಾರಣೆ]
41. [ನಿಯಮಗಳ ರಚನಾಧಿಕಾರ]
42. [ವಿನಿಯಮಗಳ ರಚನಾಧಿಕಾರ]

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**I**

**ಅಧಿನಿಯಮ ಸಂಖ್ಯೆ 2020ರ 38.-** ಸರ್ವಜ್ಞ ಕರ್ನಾಟಕದ ಶ್ರೇಷ್ಠ ಪ್ರಾಚೀನ ಕವಿ ಮತ್ತು ಸಮಾಜ ಸುಧಾರಕರಾಗಿದ್ದರು ಮತ್ತು ಅವರು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಜನಿಸಿದರು. ಆದ್ದರಿಂದ, ಸರ್ವಜ್ಞರ ಜನ್ಮ ಸ್ಥಳವನ್ನು ಒಳಗೊಂಡು ಹಿರೇಕೆರೂರಿನ ಸುತ್ತಮುತ್ತಲಿರುವ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರು ಮತ್ತು ಮಾಸೂರುಗಳ ಸರ್ವಜ್ಞ ಕ್ಷೇತ್ರವನ್ನು ಅಂತರರಾಷ್ಟ್ರೀಯ ಯಾತ್ರಾ ಮತ್ತು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ಮತ್ತು ನಿರ್ವಹಣೆ ಮಾಡಲು ಪ್ರಾಧಿಕಾರವನ್ನು ಸ್ಥಾಪಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ: 16, ಕಡತ ಸಂಖ್ಯೆ: ಸಂವ್ಯಶಾಇ 37 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 32 ಹಾಗೂ 3ನೇ ಪಟ್ಟಿಯ 20 ಮತ್ತು 40ನೇಯ ನಮೂದನೆಯಡಿಯಲ್ಲಿ ಬರುತ್ತದೆ]

**II**

**2025ರ ಅಧಿನಿಯಮ ಸಂಖ್ಯೆ: 50** ಮುಖ್ಯಮಂತ್ರಿ ಅಥವಾ ಕಂದಾಯ ಮಂತ್ರಿ ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾವುದೇ ಇತರ ಮಂತ್ರಿಯವರು ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗುವ ಕುರಿತಾದ ಉಪಬಂಧವನ್ನು ಪರಿಷ್ಕರಿಸಲು, ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 38)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 41, ಕಡತ ಸಂಖ್ಯೆ:ಸಂವ್ಯಶಾಇ 40 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 32ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:552, ದಿನಾಂಕ:09.09.2025 ರಲ್ಲಿ ಪ್ರಕಟಗೊಂಡಿದೆ]

**2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 38**

(2020 ರ ಅಕ್ಟೋಬರ್ ತಿಂಗಳ 20ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)
(2025ರ ಅಧಿನಿಯಮ ಸಂಖ್ಯೆ:50ರ ಮೂಲಕ ತಿದ್ದುಪಡಿಯಾದಂತೆ)

ಸರ್ವಜ್ಞನ ಜನ್ಮಸ್ಥಳವೂ ಸೇರಿದಂತೆ ಹಾವೇರಿ ಜಿಲ್ಲೆಯಲ್ಲಿನ ಹಿರೇಕೆರೂರು ತಾಲ್ಲೂಕಿನ ಹಿರೇಕೆರೂರು, ಅಬಲೂರು ಮತ್ತು ಮಾಸೂರು ಇಲ್ಲಿ ಮತ್ತು ಇದರ ಸುತ್ತಮುತ್ತಲು ಇರುವ ಸರ್ವಜ್ಞ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸರ್ವಜ್ಞನ ಜನ್ಮಸ್ಥಳವೂ ಸೇರಿದಂತೆ ಹಾವೇರಿ ಜಿಲ್ಲೆಯಲ್ಲಿನ ಹಿರೇಕೆರೂರು ತಾಲ್ಲೂಕಿನ ಹಿರೇಕೆರೂರು, ಅಬಲೂರು ಮತ್ತು ಮಾಸೂರು ಇಲ್ಲಿ ಮತ್ತು ಇದರ ಸುತ್ತಮುತ್ತಲು ಇರುವ ಸರ್ವಜ್ಞ ಕ್ಷೇತ್ರವನ್ನು ಅಂತರರಾಷ್ಟ್ರೀಯ ಯಾತ್ರಾಸ್ಥಳ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ – I

## ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.– (1) ಈ ಅಧಿನಿಯಮವನ್ನು ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2020 ಎಂದು ಕರೆಯತಕ್ಕದ್ದು.

   (2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು**.– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸೌಕರ್ಯ" ಎಂಬುದರಲ್ಲಿ ರಸ್ತೆ, ಬೀದಿಗಳು, ಸುರಂಗ ಮಾರ್ಗಗಳು, ದೀಪದ ವ್ಯವಸ್ಥೆ, ಚರಂಡಿ ವ್ಯವಸ್ಥೆ, ನೈರ್ಮಲೀಕರಣ, ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಅಥವಾ ಇತರ ಅನುಕೂಲತೆಗಳು, ಲೋಕೋಪಯೋಗಿ

ಕಾಮಗಾರಿಗಳು, ಮಾರುಕಟ್ಟೆ ಸ್ಥಳಗಳು, ಅಂಚೆ ಕಚೇರಿಗಳು, ಬ್ಯಾಂಕುಗಳು, ಆಸ್ಪತ್ರೆಗಳು, ಚಿಕಿತ್ಸಾಲಯಗಳು, ಪೊಲೀಸ್ ಠಾಣೆಗಳು, ನ್ಯಾಯಬೆಲೆ ಅಂಗಡಿಗಳು, ಹಾಲಿನ ಬೂತುಗಳು, ಗ್ರಂಥಾಲಯಗಳು, ಮನರಂಜನಾ ಕೇಂದ್ರಗಳು, ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವುದೇ ಸಾರ್ವಜನಿಕ ಉಪಯುಕ್ತ ಸೇವೆಯ ಸೇವಾ ಕೇಂದ್ರಗಳು ಅಥವಾ ಇತರ ಸೌಲಭ್ಯಗಳು ಸೇರಿಕೊಳ್ಳುತ್ತವೆ; ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸೌಕರ್ಯಗಳನ್ನು ಒಳಗೊಳ್ಳುತ್ತದೆ;

(ಬಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚನೆಯಾದ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ;

(ಸಿ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಡಿ) "ಆಯುಕ್ತ" ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರಾಧಿಕಾರದ ಆಯುಕ್ತ;

(ಇ) "ನಿಧಿ" ಎಂದರೆ, ಪ್ರಾಧಿಕಾರದ ನಿಧಿ;

(ಎಫ್) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಜಿ) "ಸರ್ವಜ್ಞ ಕ್ಷೇತ್ರ" ಎಂದರೆ, ಪ್ರಾಚೀನ ಸ್ಮಾರಕಗಳು ಮತ್ತು ಐತಿಹಾಸಿಕ ಸ್ಥಳಗಳು ಹಾಗೂ ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ ಸಂಖ್ಯೆ: 24) ಅಡಿಯಲ್ಲಿ ಸಂರಕ್ಷಿತ ಪ್ರದೇಶವೆಂದು ಉಲ್ಲೇಖಿಸಲಾದ ಪ್ರದೇಶವನ್ನು ಹೊರತುಪಡಿಸಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ತಾಣಗಳನ್ನು ಒಳಗೊಳ್ಳುವ ಸಂಪೂರ್ಣ ಪ್ರದೇಶ ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದಾದ ಅಂಥ ಇತರ ಪ್ರದೇಶಗಳು;

(ಹೆಚ್) "ಸದಸ್ಯ" ಎಂದರೆ, ಪ್ರಾಧಿಕಾರದ ಒಬ್ಬ ಸದಸ್ಯ;

(ಐ) "ವಿನಿಯಮಗಳು" ಎಂದರೆ, 42ನೇ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರಾಧಿಕಾರದ ವಿನಿಯಮಗಳು;

(ಜೆ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿ.

## ಅಧ್ಯಾಯ – II

## ಪ್ರಾಧಿಕಾರ ಮತ್ತು ಅದರ ಉದ್ಯೋಗಿಗಳು

**3. ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅಂಥ ಸ್ಥಳದಲ್ಲಿ ತನ್ನ ಕೇಂದ್ರ ಕಾರ್ಯಸ್ಥಾನವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

(3) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(4) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

[1][(ಎ) ಮುಖ್ಯಮಂತ್ರಿ ಅಥವಾ ಕಂದಾಯ ಮಂತ್ರಿ ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾರೇ ಇತರ ಮಂತ್ರಿ - ಪದನಿಮಿತ್ತ ಅಧ್ಯಕ್ಷರು.][1]

1. 2025 ರ ಅಧಿನಿಯಮ ಸಂಖ್ಯೆ:50ರ ಮೂಲಕ ದಿ:09.09.2025 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಹಾವೇರಿ ಜಿಲ್ಲೆಯ ಉಸ್ತುವಾರಿಯಲ್ಲಿರುವ ಮಂತ್ರಿಗಳು ಉಪಾಧ್ಯಕ್ಷರಾಗಿರತಕ್ಕದ್ದು;

| | | |
|---|---|---|
| (ಸಿ) ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು | – | ಸದಸ್ಯರು |
| (ಡಿ) ಕಂದಾಯ ಮಂತ್ರಿಗಳು | – | ಸದಸ್ಯರು |
| (ಇ) ಹಣಕಾಸು ಮಂತ್ರಿಗಳು | – | ಸದಸ್ಯರು |
| (ಎಫ್) ಪ್ರವಾಸೋದ್ಯಮ ಮಂತ್ರಿಗಳು | – | ಸದಸ್ಯರು |
| (ಜಿ) ಲೋಕೋಪಯೋಗಿ ಮಂತ್ರಿಗಳು | – | ಸದಸ್ಯರು |
| (ಎಚ್) ಸರ್ವಜ್ಞ ಕ್ಷೇತ್ರವನ್ನು ಭಾಗಶ: ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ಲೋಕಸಭಾ ಮತ್ತು ವಿಧಾನಸಭೆಯ ಸದಸ್ಯರು ಹಾಗೂ ಸರ್ವಜ್ಞ ಕ್ಷೇತ್ರದಲ್ಲಿ ಮತದಾರರಾಗಿ ನೋಂದಾಯಿತರಾದ ರಾಜ್ಯಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರು. | – | ಸದಸ್ಯರು |
| (ಐ) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ. | – | ಪದನಿಮಿತ್ತ ಸದಸ್ಯರು |
| (ಜೆ) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕಂದಾಯ ಇಲಾಖೆ. | – | ಪದನಿಮಿತ್ತ ಸದಸ್ಯರು |
| (ಕೆ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಹಣಕಾಸು ಇಲಾಖೆ. | – | ಪದನಿಮಿತ್ತ ಸದಸ್ಯರು |
| (ಎಲ್) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. | – | ಪದನಿಮಿತ್ತ ಸದಸ್ಯರು |
| (ಎಂ) ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, | – | ಪದನಿಮಿತ್ತ |

| | | |
|---|---|---|
| ಲೋಕೋಪಯೋಗಿ ಇಲಾಖೆ. | | ಸದಸ್ಯರು |
| (ಎನ್) ಬೆಳಗಾವಿ ಪ್ರದೇಶದ ಪ್ರಾದೇಶಿಕ ಆಯುಕ್ತರು. | – | ಪದನಿಮಿತ್ತ ಸದಸ್ಯರು |
| (ಒ) ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿ. | – | ಪದನಿಮಿತ್ತ ಸದಸ್ಯರು |
| (ಪಿ) ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆ. | – | ಪದನಿಮಿತ್ತ ಸದಸ್ಯರು |
| (ಕ್ಯೂ) ಜಂಟಿ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ. | – | ಪದನಿಮಿತ್ತ ಸದಸ್ಯರು |
| (ಆರ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ | – | ಪದನಿಮಿತ್ತ ಸದಸ್ಯರು |
| (ಎಸ್) ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾವೇರಿ. | – | ಪದನಿಮಿತ್ತ ಸದಸ್ಯರು |
| (ಟಿ) ಅಬಲೂರು ಮತ್ತು ಮಾಸೂರು ಗ್ರಾಮಪಂಚಾಯತಿಯ ಅಧ್ಯಕ್ಷರು. | – | ಪದನಿಮಿತ್ತ ಸದಸ್ಯರು |
| (ಯು) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಮೂವರನ್ನು ಮೀರದ ಸರ್ಕಾರೇತರ ಸದಸ್ಯರು. | – | ಸರ್ಕಾರೇತರ ಸದಸ್ಯರು |
| (ವಿ) ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ, ಸರ್ವಜ್ಞನ ಇತಿಹಾಸ ಮತ್ತು ಪರಂಪರೆಯ ಕುರಿತು ತಜ್ಞರಾಗಿರುವ ಐವರನ್ನು ಮೀರದ ವ್ಯಕ್ತಿಗಳು. | – | ಸರ್ಕಾರೇತರ ಸದಸ್ಯರು |
| (ಡಬ್ಲ್ಯೂ) ಪ್ರಾಧಿಕಾರದ ಆಯುಕ್ತರು | – | ಸದಸ್ಯ ಕಾರ್ಯದರ್ಶಿ |

**4. ಪದಾವಧಿ ಮತ್ತು ಸೇವಾ ಷರತ್ತುಗಳು**.- (1) ರಾಜ್ಯ ಸರ್ಕಾರದ ಇಚ್ಛೆಗೊಳಪಟ್ಟು, ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಗೆ ಪದಧಾರಣ ಮಾಡತಕ್ಕದ್ದು.

(2) ಯಾವೊಬ್ಬ ಸರ್ಕಾರೇತರ ಸದಸ್ಯನು ತನ್ನ ಸ್ವ-ಹಸ್ತದಿಂದ ರಾಜ್ಯ ಸರ್ಕಾರಕ್ಕೆ ಬರೆಯುವ ಮೂಲಕ ತನ್ನ ಪದಕ್ಕೆ ರಾಜೀನಾಮೆಯನ್ನು ನೀಡಬಹುದು. ಆದರೆ ಅವನ ರಾಜೀನಾಮೆಯು ಅಂಗೀಕಾರವಾಗುವವರೆಗೂ ಪದದಲ್ಲಿ ಮುಂದುವರೆಯತಕ್ಕದ್ದು.

(3) ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸರ್ಕಾರೇತರ ಸದಸ್ಯರು ಪಡೆಯತಕ್ಕದ್ದು.

**5. ಸದಸ್ಯತ್ವದ ಪದಕ್ಕೆ ಅನರ್ಹತೆಗಳು**.– ಸರ್ಕಾರೇತರ ಸದಸ್ಯರು,-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಒಂದು ಸಂಸ್ಥೆ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಿದವನಾಗಿದ್ದರೆ ಅಥವಾ ವಜಾ ಮಾಡಿದವನಾಗಿದ್ದರೆ; ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾದ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಪಾಲುದಾರನಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಎಫ್) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಅವನು ಸದಸ್ಯನಾಗಿ ನೇಮಕ ಹೊಂದಲು ಅಥವಾ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು:

ಪರಂತು, ಒಬ್ಬ ವ್ಯಕ್ತಿಯು, ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ನೀಡಿದ, ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

**6. ಸರ್ಕಾರೇತರ ಸದಸ್ಯನನ್ನು ತೆಗೆದುಹಾಕುವುದು.-** ರಾಜ್ಯ ಸರ್ಕಾರವು ಯಾವೊಬ್ಬ ಸರ್ಕಾರೇತರ ಸದಸ್ಯನನ್ನು,-

(ಎ) ಅವನು 5ನೇ ಪ್ರಕರಣದಲ್ಲಿ ಹೇಳಲಾದ ಅನರ್ಹತೆಗಳಲ್ಲಿ ಯಾವುದೇ ಅನರ್ಹತೆಗೆ ಒಳಪಟ್ಟರೆ:

(ಬಿ) ಅವನು ಕಾರ್ಯ ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅವನು ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ:

(ಡಿ) ಅವನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವಂತೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ:

-ಅವನನ್ನು ತೆಗೆದುಹಾಕತಕ್ಕದ್ದು.

ಪರಂತು, ಯಾವೊಬ್ಬ ಸದಸ್ಯನನ್ನು ಪ್ರಸ್ತಾವದ ವಿರುದ್ಧ ಅವನಿಗೆ ತನ್ನ ಮನವಿಯನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ಹೊರತು, ಈ ಖಂಡದ ಅಡಿಯಲ್ಲಿ ತೆಗೆದು ಹಾಕತಕ್ಕದ್ದಲ್ಲ.

**7. ಮರುನೇಮಕಾತಿಗೆ ಅರ್ಹತೆ**.- ಯಾವೊಬ್ಬ ಸದಸ್ಯನು, ಸದಸ್ಯನಾಗಿರುವುದು ಸಮಾಪ್ತಿಯಾದಾಗ, 6ನೇ ಪ್ರಕರಣದ ಅಡಿಯಲ್ಲಿ ತೆಗೆದುಹಾಕಲಾಗಿದ್ದ ಹೊರತು, ಸದಸ್ಯನಾಗಿ ಮರುನೇಮಕ ಹೊಂದಲು ಅರ್ಹನಾಗಿರತಕ್ಕದ್ದು.

**8. ಪ್ರಾಧಿಕಾರದ ಅಧಿಕಾರಗಳು**.- (1) ಈ ಅಧಿನಿಯಮದ ಉದ್ದೇಶಗಳು ಮತ್ತು ಉಪಬಂಧಗಳನ್ನು ಪರಿಣಾಮಗೊಳಿಸಲು ಪ್ರಾಧಿಕಾರವು ಅವಶ್ಯಕವೆಂದು ಅಭಿಪ್ರಾಯಪಡುವಂಥ ಯಾವುವೇ ಕಾರ್ಯಗಳನ್ನು ಮಾಡುವುದಕ್ಕೆ ಸಾಮಾನ್ಯವಾಗಿ ಪ್ರಾಧಿಕಾರವು ಅಧಿಕಾರವನ್ನು ಹೊಂದಿರತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದೇ ಇತರ ಪ್ರಾಧಿಕಾರವು ನೆರವೇರಿಸಬೇಕೆಂದು ಈ ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ಹೇಳಿದಂಥ ಯಾವುದೇ ಕಾರ್ಯವನ್ನು ನೆರವೇರಿಸಲು ಈ ಪ್ರಾಧಿಕಾರವನ್ನು ಅಧಿಕೃತಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು,

(ಎ) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಈ ಅಧಿನಿಯಮದ ಯಾವುದೇ ಉದ್ದೇಶವನ್ನು ನೆರವೇರಿಸಲು ಅವಶ್ಯಕ ಅಥವಾ ಯುಕ್ತವೆಂದು ತಾನು ಪರಿಗಣಿಸಬಹುದಾದ ಎಲ್ಲ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ನೆರವೇರಿಸಲು ಅಧಿಕಾರವನ್ನು ಹೊಂದಿರತಕ್ಕದ್ದು. ಹಾಗೂ ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಪರವಾಗಿ ಆಯುಕ್ತರು ಮಾಡಿಕೊಳ್ಳತಕ್ಕದ್ದು:

ಪರಂತು, ಐದು ಲಕ್ಷ ರೂಪಾಯಿಗಳು ಅಥವಾ ಅದಕ್ಕೂ ಹೆಚ್ಚು ವೆಚ್ಚವನ್ನೊಳಗೊಳ್ಳುವ ಯಾವ ಕರಾರನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೇ ಮಾಡಿಕೊಳ್ಳತಕ್ಕದ್ದಲ್ಲ.

(ಬಿ) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಈ ಸಂಬಂಧವಾಗಿ ನಿಯಮಿಸಬಹುದಾದಂತಹ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಅಗತ್ಯವಾಗುವ ಯಾವುದೇ ಮೊಬಲಗನ್ನು ಸಾಲವಾಗಿ ಪಡೆಯಲು ಅಧಿಕಾರವನ್ನು ಹೊಂದಿರತಕ್ಕದ್ದು;

(ಸಿ) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಮುಕ್ತ ಸ್ಥಳಗಳನ್ನು ರೂಪಿಸುವುದಕ್ಕಾಗಿ ಅಥವಾ ಕಟ್ಟಡದ ಉದ್ದೇಶಗಳಿಗಾಗಿ ಅಥವಾ ಅಭಿವೃದ್ಧಿ ಯೋಜನೆಯ ಯಾವುದೇ ಇತರ ರೀತಿಯ ಉದ್ದೇಶಕ್ಕಾಗಿ, 38 ಮತ್ತು 39ನೇ ಪ್ರಕರಣಕ್ಕೆ ಮತ್ತು ನಿಯಮಿಸಬಹುದಾದ ಅಂಥ ನಿರ್ಬಂಧಗಳು, ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು ಅದಕ್ಕೆ ಸೇರಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆ ನೀಡುವುದು, ಮಾರಾಟ ಮಾಡುವುದು ಅಥವಾ ಅನ್ಯಥಾ ವರ್ಗಾಯಿಸುವುದು ಮತ್ತು ತನ್ನಲ್ಲಿ ನಿಹಿತವಾಗಿರುವ ಅಥವಾ ಸ್ವಾಧೀನಪಡಿಸಿಕೊಂಡಿರುವ ಯಾವುದೇ ಭೂಮಿಯನ್ನು ವಿನಿಯೋಗಿಸಲು ಅಥವಾ ಉಪಯೋಗಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

**9. ಪ್ರಾಧಿಕಾರದ ಉಪ ಸಮಿತಿಗಳು**.- (1) ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಆಯುಕ್ತನು ಅಧ್ಯಕ್ಷನಾಗಿರುವ ಮತ್ತು ಪ್ರತಿಯೊಂದು ಉಪಸಮಿತಿಗೆ ಐದು ಜನರಿಗೆ ಮೀರದಂಥ ಇತರ ಸದಸ್ಯರಿರುವ ಒಂದು ಅಥವಾ ಹೆಚ್ಚು ಉಪಸಮಿತಿಗಳನ್ನು ರಚಿಸಬಹುದು. ಉಪಸಮಿತಿಯಲ್ಲಿ ಚರ್ಚಿಸಿ ತೀರ್ಮಾನಿಸಲಾದ ಯಾವುದೇ ವಿಷಯವನ್ನು ಅನುಮೋದನೆ ಅಥವಾ ನಿರಾಕರಣೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸತಕ್ಕದ್ದು. ತೀರ್ಮಾನವನ್ನು ಉಪಸಮಿತಿಗೆ ಹಿಂದಿರುಗಿಸಬಹುದು.

(2) ಉಪಸಮಿತಿಗಳು, ಅವುಗಳಿಗೆ ಪ್ರಾಧಿಕಾರವು ಪ್ರತ್ಯಾಯೋಜಿಸಿದಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(3) ಪ್ರತಿಯೊಂದು ಉಪಸಮಿತಿಯು ಕನಿಷ್ಠ ಪಕ್ಷ  ಮೂರು ತಿಂಗಳಿಗೆ ಒಂದು ಸಲವಾದರೂ ಸಭೆ ಸೇರತಕ್ಕದ್ದು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಅದರ ಸಭೆಯಲ್ಲಿನ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನದ ಅಂಥ ನಿಯಮಗಳನ್ನು ಪಾಲಿಸತಕ್ಕದ್ದು.

**10. ಆಯುಕ್ತನ ನೇಮಕಾತಿ**.- (1) ರಾಜ್ಯ ಸರ್ಕಾರವು, ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯನ್ನು ಪ್ರಾಧಿಕಾರದ ಆಯುಕ್ತನನ್ನಾಗಿ ನೇಮಿಸತಕ್ಕದ್ದು.

(2) ಆಯುಕ್ತನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅಂಥ ವೇತನ ಮತ್ತು ಇತರ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು. ಆಯುಕ್ತನ ಸೇವಾ ಷರತ್ತುಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು  ನಿಯಂತ್ರಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ತಾನು ಯುಕ್ತವೆಂದು ಭಾವಿಸುವಂಥ ಅವಧಿಗೆ ಆಯುಕ್ತನಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಬಹುದು.

**11. ಆಯುಕ್ತನ ಅಧಿಕಾರಗಳು ಮತ್ತು ಕರ್ತವ್ಯಗಳು.**- (1) ಆಯುಕ್ತನು, ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಮತ್ತು ಆಡಳಿತಾಧಿಕಾರಿಯಾಗಿರತಕ್ಕದ್ದು.

(2) ಆಯುಕ್ತನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ತನಗೆ ಪ್ರದತ್ತವಾಗಿರುವಂತಹ ಪ್ರಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ,-

(ಎ) ಪ್ರಾಧಿಕಾರದ ಗೊತ್ತುವಳಿಗಳನ್ನು ಅನುಷ್ಠಾನಗೊಳಿಸತಕ್ಕದ್ದು;

(ಬಿ) ಪ್ರಾಧಿಕಾರದ ವ್ಯವಹಾರವನ್ನು ನಡೆಸುವುದು ಮತ್ತು ಪತ್ರ ವ್ಯವಹಾರವನ್ನು ನಡೆಸತಕ್ಕದ್ದು ;

(ಸಿ) ಸರ್ಕಾರವು ನಿರ್ದೇಶಿಸಬಹುದಾದ ಅಂಥ ಯೋಜನೆಗಳನ್ನು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಹಾಗೂ ಅದಕ್ಕಾಗಿ ಅವಶ್ಯ ವೆಚ್ಚವನ್ನು ಮಾಡತಕ್ಕದ್ದು;

(ಡಿ) ಪ್ರಾಧಿಕಾರದ ಯೋಜನೆಗಳ ಅನುಷ್ಠಾನಕ್ಕಾಗಿ ಜವಾಬ್ದಾರನಾಗಿರತಕ್ಕದ್ದು;

(ಇ) ಪ್ರಾಧಿಕಾರದ ಬ್ಯಾಂಕ್ ಖಾತೆಗಳಲ್ಲಿ ವ್ಯವಹಾರ ನಡೆಸತಕ್ಕದ್ದು ಮತ್ತು ಪ್ರಾಧಿಕಾರದ

ಲೆಕ್ಕಪತ್ರಗಳನ್ನು ನಿರ್ವಹಿಸಲು ಜವಾಬ್ದಾರರಾಗಿರತಕ್ಕದ್ದು;

(ಎಫ್) ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರ ಕಾರ್ಯನಿರ್ವಹಣೆ, ಆಡಳಿತಾತ್ಮಕ ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರ ಸೇವಾ ಷರತ್ತುಗಳ ವಿಷಯಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಹಾಗೂ ಅವರ ವೇತನ ಮತ್ತು ಭತ್ಯೆಗಳನ್ನು ನಿಯಂತ್ರಿಸತಕ್ಕದ್ದು;

(ಜಿ) ಪ್ರಾಧಿಕಾರದ ಸಂಕ್ಷಿಪ್ತ ಟಿಪ್ಪಣಿಗಳ ಮತ್ತು ಯಾವುದೇ ವಿವರ ಪತ್ರದ ಪ್ರತಿಯನ್ನು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಕೋರಬಹುದಾದ ಇತರ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು;

(ಎಚ್) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಆತನಿಗೆ ಪ್ರದತ್ತವಾದ ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**12. ಪ್ರಾಧಿಕಾರದ ನೌಕರರು.**- (1) ನಿಯಮಿಸಬಹುದಾದಂತಹ ನಿಯಮಗಳಿಗೊಳಪಟ್ಟು ಪ್ರಾಧಿಕಾರವು, ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅದು ಅವಶ್ಯವೆಂದು ಭಾವಿಸುವಂತಹ ಸಂಖ್ಯೆಯ ನೌಕರರನ್ನು ನೇಮಕ ಮಾಡಿಕೊಳ್ಳಬಹುದು:

ಪರಂತು, ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಸೇವೆಯಿಂದ ಗ್ರೂಪ್ "ಎ" ಕಿರಿಯಶ್ರೇಣಿ ಅಧಿಕಾರಿಯ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ

ಅಧಿಕಾರಿಯನ್ನು ನಿಯೋಜನೆಯ ಮೇಲೆ ಹಣಕಾಸು ಮತ್ತು ಲೆಕ್ಕಪತ್ರದ ನಿಯಂತ್ರಣಾಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು.

(2) ಹಣಕಾಸು ಮತ್ತು ಲೆಕ್ಕಪತ್ರ ನಿಯಂತ್ರಣಾಧಿಕಾರಿಯು ಆಯುಕ್ತನಲ್ಲಿ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ಪ್ರಾಧಿಕಾರದ ಹಣಕಾಸು ವ್ಯವಹಾರಗಳ ಬಗ್ಗೆ ವಾಸ್ತವಿಕವಾದ ಹಾಗೂ ನ್ಯಾಯಯುತವಾದ ಚಿತ್ರಣವನ್ನು ನೀಡುವ ಮೂಲಕ ಹಣಕಾಸು ನಿಯಮಗಳನ್ನು ಪಾಲಿಸಲಾಗುತ್ತಿದೆ ಮತ್ತು ಲೆಕ್ಕಪತ್ರಗಳನ್ನು ಅಂದಂದಿನವರೆಗೆ ನಿರ್ವಹಿಸಲಾಗುತ್ತಿದೆಯೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೌಕರರ ನೇಮಕಾತಿ ವಿಧಾನ, ವೇತನಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಪ್ರಾಧಿಕಾರದ ನೌಕರರಿಗೆ ಸಂಬಂಧಿಸಿದಂತೆ ಆಯುಕ್ತನು ನೇಮಕಾತಿ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಪ್ರಾಧಿಕಾರದ ಸಿಬ್ಬಂದಿಯ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಮೇಲ್ವಿಚಾರಣೆಯನ್ನು ಮಾಡತಕ್ಕದ್ದು.

**13. ಪ್ರಾಧಿಕಾರದ ಅಡಿಯಲ್ಲಿನ ಸೇವೆಗಳಿಗಾಗಿ ಸಾಮಾನ್ಯ ಅನರ್ಹತೆಗಳು**.- ಯಾವೊಬ್ಬ ವ್ಯಕ್ತಿಯು, ನೇರವಾಗಿ ಅಥವಾ ಪರೋಕ್ಷವಾಗಿ, ಖುದ್ದಾಗಿ ಅಥವಾ ತನ್ನ ಪಾಲುದಾರನ ಮೂಲಕ ಅಥವಾ ತನ್ನ ಏಜಂಟನ ಮೂಲಕ ಪ್ರಾಧಿಕಾರದ ಯಾವುದೇ ಷೇರನ್ನು ಹೊಂದಿದ್ದರೆ ಅಥವಾ ಪ್ರಾಧಿಕಾರವು ಮಾಡಿಕೊಂಡ ಇಲ್ಲವೇ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಹಿತಾಸಕ್ತಿಯನ್ನು ಹೊಂದಿದ್ದರೆ ಆತನು ಪ್ರಾಧಿಕಾರದ ಅಧಿಕಾರಿ ಅಥವಾ ಉದ್ಯೋಗಿಯಾಗತಕ್ಕದ್ದಲ್ಲ ಅಥವಾ ಉದ್ಯೋಗಿಯಾಗಿ ಉಳಿಯತಕ್ಕದ್ದಲ್ಲ.

**14. ಪ್ರಾಧಿಕಾರದ ಸಭೆಗಳು**.- (1) ಪ್ರಾಧಿಕಾರದ ಆಯುಕ್ತರು, ಪ್ರಾಧಿಕಾರದ ಅಧ್ಯಕ್ಷರ ಪೂರ್ವಾನುಮೋದನೆಯೊಂದಿಗೆ ಮತ್ತು ಅಧ್ಯಕ್ಷರು ಯುಕ್ತವೆಂದು ಭಾವಿಸಬಹುದಾದ ಅಂಥ ಅವಧಿಗಳ ಅಂತರದಲ್ಲಿ ಮತ್ತು ಅಧ್ಯಕ್ಷರು ನಿರ್ಧರಿಸಬಹುದಾದ ಅಂಥ ಸ್ಥಳದಲ್ಲಿ ಪ್ರಾಧಿಕಾರದ ಸಭೆಗಳನ್ನು ನಡೆಸತಕ್ಕದ್ದು:

ಪರಂತು, ಪ್ರಾಧಿಕಾರವು ಒಂದು ಕ್ಯಾಲೆಂಡರ್ ವರ್ಷದಲ್ಲಿ ಕನಿಷ್ಠ ಎರಡು ಬಾರಿಯಾದರೂ ಸಭೆ ಸೇರತಕ್ಕದ್ದು.

(2) ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷನು ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದಾಗಿ ಅಧ್ಯಕ್ಷನಿಗೆ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಉಪಾಧ್ಯಕ್ಷನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಯಾವುದೇ ಕಾರಣಕ್ಕಾಗಿ ಉಪಾಧ್ಯಕ್ಷನಿಗೆ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರ ಪೈಕಿ ಆಯ್ಕೆ ಮಾಡಲಾಗುವ ಯಾವೊಬ್ಬ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಪ್ರಾಧಿಕಾರದ ತೀರ್ಮಾನಗಳನ್ನು ಹಾಜರಿದ್ದು ಮತ ಹಾಕುವ ಸದಸ್ಯರ ಸರ್ವಾನುಮತದ ಸಮ್ಮತಿ ಸೂಚನೆಯ ಮೂಲಕ ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ಮುಂದೆ

ತೀರ್ಮಾನಕ್ಕಾಗಿ ಬಂದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯಗಳಿದ್ದಲ್ಲಿ, ಆಯುಕ್ತನು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯಗಳಲ್ಲಿ ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಪ್ರಾಧಿಕಾರದ ಆಯುಕ್ತನು, ಪ್ರಾಧಿಕಾರದ ತೀರ್ಮಾನಗಳನ್ನು ಕಾರ್ಯಗತಗೊಳಿಸತಕ್ಕದ್ದು:

ಪರಂತು, ಪ್ರಾಧಿಕಾರವು ಕೈಗೊಂಡ ನಿರ್ಣಯವು ಈ ಅಧಿನಿಯಮದ ಅಥವಾ ಇತರ ಕಾನೂನಿನ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಯಾವುದೇ ನಿಯಮ ಅಥವಾ ಅಧಿಸೂಚನೆ ಅಥವಾ ವಿನಿಯಮಗಳ ಉಪಬಂಧವನ್ನು ಅಥವಾ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಆದೇಶವನ್ನು ಉಲ್ಲಂಘಿಸುತ್ತದೆಯೆಂದು ಅಥವಾ ಪ್ರಾಧಿಕಾರದ ಹಿತಾಸಕ್ತಿಗೆ ಅಥವಾ ಕ್ಷೇತ್ರದ ಅಭಿವೃದ್ಧಿ ಮತ್ತು ನಿರ್ವಹಣೆಗೆ ಧಕ್ಕೆ ಉಂಟುಮಾಡುತ್ತದೆ ಅಥವಾ ಹಾನಿಕಾರಕವಾಗುತ್ತದೆಯೆಂದು ಆಯುಕ್ತನು ಅಭಿಪ್ರಾಯಪಟ್ಟರೆ, ಅವನು ನಿರ್ಣಯವನ್ನು ಅನುಮೋದಿಸಲಾದ ಹದಿನೈದು ದಿನಗಳ ಒಳಗಾಗಿ ವಿಷಯದ ಬಗ್ಗೆ ಆದೇಶಗಳನ್ನು ಕೋರಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ತಿಳಿಸತಕ್ಕದ್ದು ಮತ್ತು ಆಯುಕ್ತನು ಕಳುಹಿಸಿಕೊಟ್ಟ ಅಂತಹ ವಿಷಯದ ಬಗ್ಗೆ ರಾಜ್ಯ ಸರ್ಕಾರವು ಆದೇಶವನ್ನು ನೀಡುವವರೆಗೆ ಆಯುಕ್ತನು ಆ ನಿರ್ಣಯವನ್ನು ಜಾರಿಗೆ ತರಲು ಬದ್ಧನಾಗಿರತಕ್ಕದ್ದಲ್ಲ.

(5) ಪ್ರಾಧಿಕಾರವು ವಿನಿಮಯಗಳ ಮೂಲಕ ತನ್ನ ಸಭೆಗಳ ವ್ಯವಹಾರ ನಿರ್ವಹಣೆಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದ ಕಾರ್ಯವಿಧಾನವನ್ನು ನಿರ್ದಿಷ್ಟಪಡಿಸಬಹುದು.

**15. ವ್ಯವಹರಣೆಗಳು ಸರಿಯಾದುದೆಂದು ಮತ್ತು ಸಿಂಧುವಾದುದೆಂದು ಪೂರ್ವಭಾವನೆ ಮಾಡುವುದು**.– ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಕಾರ್ಯನಿರ್ವಹಿಸುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ನ್ಯೂನತೆಯು ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ನಡವಳಿಯು ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿದ್ದರೆ ಅಂತಹ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುತ್ತದೆಂದು ಭಾವಿಸತಕ್ಕದ್ದಲ್ಲ.

**16. ಟಿಪ್ಪಣಿಯನ್ನು ಸುತ್ತಿಸುವ ಮೂಲಕ ಪ್ರಾಧಿಕಾರದ ತೀರ್ಮಾನಗಳು**.– (1) ಅಧ್ಯಕ್ಷರು ಯಾವುದೇ ಪ್ರಕರಣವನ್ನು ಪ್ರಾಧಿಕಾರದ ಒಂದು ಸಭೆಯಲ್ಲಿ ಚರ್ಚೆಗೆ ಬದಲಾಗಿ ಆ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ಕೋರಿ ನಿಯಮಿಸಲಾದ ನಮೂನೆಯಲ್ಲಿ ಒಂದು ಟಿಪ್ಪಣಿಯನ್ನು ಪ್ರಾಧಿಕಾರದ ಸದಸ್ಯರ ನಡುವೆ ಸುತ್ತಿಸಲು ನಿರ್ದೇಶಿಸಬಹುದು. ಹಾಗೆ ಸುತ್ತಿಸಲಾದ ಟಿಪ್ಪಣಿಯಲ್ಲಿರುವ ಪ್ರಸ್ತಾವವನ್ನು ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿಕೊಂಡಲ್ಲಿ ಅದನ್ನು ಪ್ರಾಧಿಕಾರದ ಸಮ್ಮತಿಸೂಚಕ ನಿರ್ಣಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಮುಂದಿನ ಕ್ರಮವನ್ನು ಕೈಗೊಳ್ಳತಕ್ಕದ್ದು. ಪ್ರಾಧಿಕಾರದ ತೀರ್ಮಾನಕ್ಕಾಗಿ ಸುತ್ತಿಸಲಾದ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ

ಯಾವುದೇ ಭಿನ್ನಾಭಿಪ್ರಾಯ ವ್ಯಕ್ತವಾದರೆ, ಆಯುಕ್ತನು ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಬಗ್ಗೆ ರಾಜ್ಯ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಭಿಪ್ರಾಯಕ್ಕಾಗಿ ಸುತ್ತಿಸಲಾದ ಸಂದರ್ಭಗಳಲ್ಲಿ, ಯಾವೊಬ್ಬ ಸದಸ್ಯನು ಟಿಪ್ಪಣಿಯಲ್ಲಿ ನಿರ್ದಿಷ್ಟ ಪಡಿಸಿರುವ ದಿನಾಂಕದೊಳಗೆ ತಮ್ಮ ಅಭಿಪ್ರಾಯವನ್ನು ತಿಳಿಸಲು ತಪ್ಪಿದರೆ, ಸುತ್ತಿಸಲಾದ ಟಿಪ್ಪಣಿಯಲ್ಲಿ ಒಳಗೊಂಡ ಪ್ರಸ್ತಾವವನ್ನು ಅಂತಹ ಸದಸ್ಯನು ಒಪ್ಪಿಕೊಂಡಿದ್ದಾನೆಂದು ಭಾವಿಸತಕ್ಕದ್ದು.

(3) 14ನೇ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಪ್ರಕರಣದ ಅಡಿಯಲ್ಲಿ ಸುತ್ತಿಸುವ ಮೂಲಕ ಕೈಗೊಂಡ ಪ್ರಾಧಿಕಾರದ ತೀರ್ಮಾನಗಳಿಗೆ ಅನ್ವಯವಾಗತಕ್ಕದ್ದು.

(4) (1)ನೇ ಉಪಪ್ರಕರಣದ ಅಡಿಯಲ್ಲಿ ಸುತ್ತಿಸುವುದಕ್ಕಾಗಿ ಮಾಡಲಾದ ಟಿಪ್ಪಣಿಯ ಒಳಾಂಶಗಳನ್ನು ನಿಯಮಿಸತಕ್ಕದ್ದು.

**17. ಕೆಲವು ತೀರ್ಮಾನಗಳನ್ನು ಕೈಗೊಳ್ಳಲು ಅಧ್ಯಕ್ಷನ ಅಧಿಕಾರ.–** (1) ಯಾವೊಂದು ವಿಷಯವು 14ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಸಭೆಯನ್ನು ಕರೆಯಲು ಅಗತ್ಯಪಡಿಸುವಷ್ಟು ಅಥವಾ 16ನೇ ಪ್ರಕರಣದ ಅಡಿಯಲ್ಲಿ ಸುತ್ತಿಸುವ ಮೂಲಕ ಪ್ರಾಧಿಕಾರವು ತೀರ್ಮಾನಿಸುವವರೆಗೂ ಕಾಯಲು ಸಾಧ್ಯವಾಗದಷ್ಟು ತುರ್ತು ಸ್ವರೂಪದ್ದಾಗಿದೆಯೆಂದು ಅಥವಾ ವಿಷಯವು ಗಹನವಾದುದೆಂದು ಅಧ್ಯಕ್ಷನು ಅಭಿಪ್ರಾಯಪಟ್ಟಲ್ಲಿ, ತಾನು ಯುಕ್ತವೆಂದು ಭಾವಿಸುವಂತಹ ಆದೇಶಗಳನ್ನು ಅವನು ನೀಡಬಹುದು ಮತ್ತು ಅದನ್ನು ಪ್ರಾಧಿಕಾರದ ತೀರ್ಮಾನಗಳ ರೀತಿಯಲ್ಲಿಯೇ ಅನುಷ್ಠಾನಗೊಳಿಸತಕ್ಕದ್ದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧ್ಯಕ್ಷನು ಕೈಗೊಂಡ ಪ್ರತಿಯೊಂದು ತೀರ್ಮಾನವನ್ನು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

## ಅಧ್ಯಾಯ III
## ಸರ್ವಜ್ಞ ಕ್ಷೇತ್ರದ ಅಭಿವೃದ್ಧಿ ಹಾಗೂ ನಿರ್ವಹಣೆ

**18. ಸರ್ವಜ್ಞ ಕ್ಷೇತ್ರದಲ್ಲಿನ ಪಾರಂಪರಿಕ ತಾಣಗಳು.–** (1) ಯಾವುದೇ ಪದ್ಧತಿ, ಸಂಪ್ರದಾಯ, ರೂಢಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸೃಜಿಸಲಾದ ಮತ್ತು ಅಸ್ತಿತ್ವದಲ್ಲಿರುವ ಯಾವುದೇ ನ್ಯಾಸದ ನಿಬಂಧನೆಗಳಲ್ಲಿ ಏನೇ ಇದ್ದರೂ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುವೇ ಪಾರಂಪರಿಕ ತಾಣಗಳ ಸಂಪೂರ್ಣ ನಿಯಂತ್ರಣ, ಮಾಲೀಕತ್ವ, ನಿರ್ವಹಣೆ ಮತ್ತು ಮೇಲ್ವಿಚಾರಣೆಯು, ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಅನುಸಾರವಾಗಿ ರಾಜ್ಯ ಸರ್ಕಾರದಲ್ಲಿ ಈಗಾಗಲೇ ನಿಹಿತಗೊಳ್ಳದಿದ್ದಲ್ಲಿ, ರಾಜ್ಯ

ಸರ್ಕಾರವು ಅಗತ್ಯವಿದ್ದಲ್ಲಿ ಸ್ವಾಧೀನಪಡಿಸಿಕೊಳ್ಳತಕ್ಕದ್ದು ಮತ್ತು ತದನಂತರ ರಾಜ್ಯ ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ ಇದು ಪ್ರಾಧಿಕಾರಕ್ಕೆ ವರ್ಗಾವಣೆಯಾಗತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30) ಅಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(2) ರಾಜ್ಯ ಸರ್ಕಾರವು, ತಾತ್ಕಾಲಿಕ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯವೆಂದು ಭಾವಿಸಿದರೆ, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹಾಗೆ ಮಾಡಬಹುದು.

**19. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ**.– ರಾಜ್ಯ ಸರ್ಕಾರವು, ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸಿದ ತರುವಾಯ ಅಧಿಸೂಚನೆಯ ಮೂಲಕ ಅನುಸೂಚಿಯಲ್ಲಿ ಯಾವುದೇ ನಮೂದನ್ನು ಸೇರಿಸಿ ಅಥವಾ ಮಾರ್ಪಡಿಸಿ ಅದನ್ನು ತಿದ್ದುಪಡಿ ಮಾಡಬಹುದು.

**20. ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು, ಅದರ ಅನುಮೋದನೆ ಹಾಗೂ ಅದನ್ನು ಕಾರ್ಯಗತಗೊಳಿಸುವುದು**.– (1) ಪ್ರಾಧಿಕಾರವು, ಅದರ ರಚನೆಯಾದ ಮೇಲೆ, ಆದಷ್ಟು ಬೇಗನೆ ಸರ್ವಜ್ಞ ಕ್ಷೇತ್ರವನ್ನು ಅಂತರರಾಷ್ಟ್ರೀಯ ಪಾರಂಪರಿಕ ತಾಣವಾಗಿ, ಸಾಂಸ್ಕೃತಿಕ ಹಾಗೂ ಪ್ರವಾಸಿ ಕೇಂದ್ರವನ್ನಾಗಿ ಮತ್ತು ಕವಿ ಸರ್ವಜ್ಞನ ಮತ್ತು ಆತನ ಸಮಕಾಲೀನರ ಕುರಿತು ಚರ್ಚೆ ಹಾಗೂ ಪ್ರಚಾರದ ಕೇಂದ್ರವನ್ನಾಗಿ ಉಳಿಸಿ ಅದನ್ನು ಅಭಿವೃದ್ಧಿಗೊಳಿಸಲು ಯೋಜನೆಯನ್ನು ಸಿದ್ಧಪಡಿಸತಕ್ಕದ್ದು. ಅಭಿವೃದ್ಧಿ ಯೋಜನೆಯು ಈ ಮುಂದಿನವುಗಳನ್ನು ಒಳಗೊಂಡಿರಬಹುದು, ಎಂದರೆ:–

(ಎ) ಯಾವುದೇ ಪಾರಂಪರಿಕ ತಾಣದ ಅಥವಾ ರಚನೆಯ ಸಂರಕ್ಷಣೆ ಮತ್ತು ಜೀರ್ಣೋದ್ಧಾರ ಹಾಗೂ ಅದರ ನಿರ್ವಹಣೆ ಮತ್ತು ಪುನರ್ ನಿರ್ಮಾಣಕ್ಕಾಗಿ ಕಾರ್ಯಕ್ರಮಗಳು;

(ಬಿ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾದ ಭೂಮಿಯನ್ನು ಆರ್ಜನೆ ಅಥವಾ ಖರೀದಿಯ ಮೂಲಕ, ವಿನಿಮಯ ಅಥವಾ ಅನ್ಯಥಾ ಆರ್ಜಿಸುವುದಕ್ಕಾಗಿ ಪ್ರಸ್ತಾವಗಳು;

(ಸಿ) ಸಾರ್ವಜನಿಕ ಉದ್ಯಾನವನಗಳು, ತೋಟಗಾರಿಕೆ ಅಥವಾ ಮೃಗೋದ್ಯಾನಗಳು, ಕಾರಂಜಿಗಳು, ಕೃತಕ ಜಲಪಾತಗಳು, ಆಟದ ಉದ್ಯಾನವನಗಳು, ದೋಣಿ ವಿಹಾರದ ಅಥವಾ ನೀರಿನ ಇತರ ಕ್ರೀಡೆಯ ಸೌಲಭ್ಯವಿರುವ ಸರೋವರಗಳನ್ನು ಅಥವಾ ಅಂಥ ಇತರ ಪ್ರವಾಸಿ ಆಕರ್ಷಣೆಗಳನ್ನು ನಿರ್ಮಿಸುವುದು;

(ಡಿ) ಛತ್ರಗಳು, ವಸತಿ-ಗೃಹಗಳು, ಕಾಟೇಜುಗಳು, ಹೋಟೆಲುಗಳು, ರೆಸ್ಟೋರೆಂಟುಗಳು ಮತ್ತು ವಿವಿಧ ವರ್ಗದ ಪ್ರವಾಸಿಗರಿಗೆ ಆಹಾರವನ್ನು ಒದಗಿಸಲು ಭೋಜನಾಲಯಗಳನ್ನು ನಿರ್ಮಿಸುವುದು;

(ಇ) ಅವಶ್ಯಕ ಅಂಗಡಿಗಳ ಸಾಲುಗಳನ್ನು ಅಥವಾ ಅಂಗಡಿ-ಸಂಕೀರ್ಣಗಳನ್ನು ನಿರ್ಮಿಸುವುದು;

(ಎಫ್) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಮತ್ತು ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸುವುದು;

(ಜಿ) ಪ್ರಾಧಿಕಾರವು, ಸಾಧಾರಣವಾಗಿ ತನ್ನ ಯೋಜನಾ ಕಾರ್ಯಕ್ಕೆ ಅನುವಾಗುವಂತೆ ಸೂಕ್ತವೆಂದು ಭಾವಿಸಿದರೆ ಮತ್ತು ಮುಖ್ಯವಾಗಿ ಉತ್ತಮ ಚರಂಡಿ ವ್ಯವಸ್ಥೆಯನ್ನು ಒದಗಿಸಲು, ಯಾವುದೇ ಭೂಮಿಯನ್ನು ಎತ್ತರಿಸುವುದು;

(ಹೆಚ್) ಸರ್ವಜ್ಞ ಕ್ಷೇತ್ರ ಒಳಗೊಳ್ಳುವ ಪ್ರದೇಶದಲ್ಲಿ ಅದಕ್ಕೆ ಲಗತ್ತಾಗಿರುವ ಯಾವುದೇ ಪ್ರದೇಶದಲ್ಲಿ ಉತ್ತಮ ಗಾಳಿ-ಬೆಳಕಿನ ವ್ಯವಸ್ಥೆಗಾಗಿ ಖಾಲಿ ಜಾಗಗಳನ್ನು ಬಿಡುವುದು;

(ಐ) ಕಟ್ಟಡಗಳ ನಿರ್ಮಾಣ ಹಾಗೂ ಪುನರ್-ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಸಂರಕ್ಷಣೆ;

(ಜೆ) ಸರ್ವಜ್ಞ ಕ್ಷೇತ್ರ ಪ್ರದೇಶದಲ್ಲಿ ಅಥವಾ ಪ್ರಾಧಿಕಾರವು ನಿರ್ಧರಿಸಿದ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು;

(ಕೆ) ಸಂಪರ್ಕ ಮತ್ತು ಸಾಗಣೆ ಸೌಲಭ್ಯಗಳಿಗಾಗಿ ಸೌಕರ್ಯಗಳನ್ನು ಕಲ್ಪಿಸುವುದು;

(ಎಲ್) ಅಭಿವೃದ್ಧಿ ಯೋಜನೆಯ ಸ್ಕೀಮಿನೊಳಗೆ ಹಾಗೆ ಮುಂದುವರೆಯುವಂತೆ ಅನುಮತಿಸಬಹುದಾದ ಭೌಗೋಳಿಕ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಅಸ್ತಿತ್ವದಲ್ಲಿರುವ ಧಾರ್ಮಿಕ ಸಂಸ್ಥೆಗಳೊಂದಿಗೆ ಅಂಥ ಹೊಂದಾಣಿಕೆಗಳು ಮತ್ತು ಒಪ್ಪಂದಗಳು;

(ಎಂ) ಸರ್ವಜ್ಞ ಕ್ಷೇತ್ರವನ್ನು ಸಾಂಸ್ಕೃತಿಕ ಕೇಂದ್ರವಾಗಿ ಯಾತ್ರಾ ಸ್ಥಳವಾಗಿ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಹಾಗೂ ಸರ್ವಜ್ಞ ಮಾತ್ರವಲ್ಲದೆ ಆತನ ಸಮಕಾಲೀನರ ಮತ್ತು ಅನುಯಾಯಿಗಳ ಚಿಂತನೆಯ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಲು ಹಾಗೂ ನಿರ್ವಹಿಸಲು, ಪ್ರಾಧಿಕಾರವು ಯುಕ್ತ ಮತ್ತು ಆನುಷಂಗಿಕವೆಂದು ಅಭಿಪ್ರಾಯಪಡುವ ಯಾವುದೇ ಇತರ ವಿಷಯ; ಸರ್ವಜ್ಞ ಮತ್ತು ಆತನ ಸಮಕಾಲೀನ ಜೀವನ ಮತ್ತು ಪ್ರವಚನಗಳಿಗೆ ಸಂಬಂಧಿಸಿದ ಇತರ ಪ್ರಮುಖ ಸ್ಥಳಗಳನ್ನು ರಕ್ಷಿಸುವುದು ಹಾಗೂ ಈ ವಿಷಯದ ಮೇಲೆ ಅಧ್ಯಯನಗಳಿಗಾಗಿ ಸಂಶೋಧನಾ ಕೇಂದ್ರ ಮತ್ತು ವಿಶೇಷ ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವುದು.

(ಎನ್) ಪ್ರಾಧಿಕಾರದ ಪ್ರಾದೇಶಿಕ ಪರಿಮಿತಿಯೊಳಗಿನ ಯಾವುದೇ ಐತಿಹಾಸಿಕ ಮತ್ತು ಪಾರಂಪರಿಕ ಸ್ಥಳದಲ್ಲಿ ಮಣ್ಣಿನಲ್ಲಿ ಹೂತು ಹೋಗಿವೆ ಎಂದು ನಂಬಲಾದ ಪ್ರಾಚೀನ

ಸ್ಮಾರಕಗಳು ಯಾವುದಾದರೂ ಇದ್ದರೆ, ಅದನ್ನು ಭೂಮಿಯಿಂದ ತೆಗೆಯುವುದಕ್ಕಾಗಿ ಉತ್ಖನನ ಮತ್ತು ಪುರಾತತ್ವದ ಸ್ವರೂಪದ ಪರಿಶೋಧನೆ:

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಪ್ರಾಚೀನ ಸ್ಮಾರಕಗಳು ಮತ್ತು ಐತಿಹಾಸಿಕ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ ಸಂಖ್ಯೆ: 24) ಉಪಬಂಧಗಳನ್ನು ಅಧ್ಯಾರೋಹಿಸುತ್ತದೆಂದು ಭಾವಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಡಿಯಲ್ಲಿ ಸಿದ್ಧಪಡಿಸಲಾದ ಅಭಿವೃದ್ಧಿ ಯೋಜನೆಯನ್ನು ಆಯುಕ್ತನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು, ಮಾರ್ಪಾಟುಗಳ ಸಹಿತವಾಗಿ ಅಥವಾ ಯಾವುವೇ ಮಾರ್ಪಾಟುಗಳಿಲ್ಲದೆ ಯೋಜನೆಯನ್ನು ಅನುಮೋದಿಸಬಹುದು.

(3) (2)ನೇ ಉಪಪ್ರಕರಣದಡಿಯ ಅಭಿವೃದ್ಧಿ ಯೋಜನೆಯನ್ನು ಅನುಮೋದಿಸಿದ ತರುವಾಯ ರಾಜ್ಯ ಸರ್ಕಾರವು, ಯೋಜನೆಯಲ್ಲಿ ಪ್ರಾಧಿಕಾರದ ಶಿಫಾರಸ್ಸುಗಳ ಮೇಲೆ ಕಾಲ ಕಾಲಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಮಾಡಬಹುದು.

(4) ಈ ಪ್ರಕರಣದಡಿಯಲ್ಲಿ ರಾಜ್ಯ ಸರ್ಕಾರವು ಅನುಮೋದಿಸಿದ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಮತ್ತು ವೆಚ್ಚವನ್ನು ಭರಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರತಕ್ಕದ್ದು.

**21. ಸರ್ವಜ್ಞ ಕ್ಷೇತ್ರದ ನಿರ್ವಹಣೆ**.- ರಾಜ್ಯ ಸರ್ಕಾರವು, ಪ್ರಾಧಿಕಾರದ ಶಿಫಾರಸ್ಸಿನ ಮೇಲೆ ಅಥವಾ ಅನ್ಯಥಾ, ಸರ್ವಜ್ಞ ಕ್ಷೇತ್ರದ ನಿರ್ವಹಣೆಗಾಗಿ, ಪಾರಂಪರಿಕ ತಾಣಗಳು ಸೇರಿದಂತೆ ಪ್ರಾಧಿಕಾರದ ಸ್ವತ್ತುಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬಹುದು ಎಂಬ ರೀತಿಯನ್ನು, ಬರುವ ಭಕ್ತರು, ಯಾತ್ರಿಕರು, ಪ್ರವಾಸಿಗರು ಮತ್ತು ಇತರ ಸಂದರ್ಶಕರು ಬಳಸಿಕೊಳ್ಳಬಹುದಾದ ಹಲವಾರು ಸೌಲಭ್ಯಗಳಿಗಾಗಿ ಅವರಿಂದ ವಸೂಲು ಮಾಡಬಹುದಾದ ದರಗಳು, ಶುಲ್ಕಗಳು ಅಥವಾ ಇತರ ಚಾರ್ಜುಗಳನ್ನು ಮತ್ತು ಪರಂಪರೆಯ ತಾಣಗಳ ಆವರಣಗಳಿಂದ ಯುಕ್ತವೆನಿಸಬಹುದಾದಂಥ ಇನ್ನಿತರ ವಿಷಯಗಳನ್ನು; ಬಾಡಿಗೆ ಅಥವಾ ನಷ್ಟ ಪರಿಹಾರವನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡುವ ಅಧಿಕಾರ ಇತ್ಯಾದಿಗಳಿಗಾಗಿ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸತಕ್ಕದ್ದು.

**22. ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ**.- ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕ ಹಾಗೂ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ ಸಂಖ್ಯೆ: 7) ಏನೇ ಇದ್ದರೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳ ರಚನಾಧಿಕಾರವನ್ನು ಹೊರತುಪಡಿಸಿ, ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರಗಳನ್ನು ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಪ್ರಾಧಿಕಾರವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**23. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು ಪ್ರಾಧಿಕಾರದ ಆವರಣಗಳಿಗೆ ಅನ್ವಯಿಸುವುದು.**– (1) ರಾಜ್ಯ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ ಅಂತಹ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) ಅಧಿನಿಯಮ, 1974ನ್ನು (1974ರ ಕರ್ನಾಟಕ ಅಧಿನಿಯಮ 32) ಪ್ರಾಧಿಕಾರಕ್ಕೆ ಸೇರಿದ, ಅದರಲ್ಲಿ ನಿಹಿತವಾದ ಅಥವಾ ಅದು ಗುತ್ತಿಗೆಗೆ ತೆಗೆದುಕೊಂಡ ಆವರಣಕ್ಕೆ, ಸಾರ್ವಜನಿಕ ಆವರಣಗಳಿಗೆ ಆ ಅಧಿನಿಯಮ ಅನ್ವಯಿಸುವಂತೆಯೇ ಅನ್ವಯಿಸತಕ್ಕದ್ದೆಂದು ಉಪಬಂಧವನ್ನು ಕಲ್ಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಮೇಲ್ಕಂಡ ಅಧಿನಿಯಮ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳು, ಪ್ರಾಧಿಕಾರದ ಆವರಣಗಳಿಗೆ ಈ ಮುಂದಿನ ಮಾರ್ಪಾಡುಗಳೊಡನೆ ಅನ್ವಯಿಸತಕ್ಕದ್ದು, ಎಂದರೆ:–

(ಎ) ರಾಜ್ಯ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವಂತೆ ರಾಜ್ಯ ಸರ್ಕಾರದ ಅಥವಾ ಪ್ರಾಧಿಕಾರದ ಯಾವೊಬ್ಬ ಅಧಿಕಾರಿಯನ್ನು ಮೇಲ್ಕಂಡ ಅಧಿನಿಯಮದ ಉದ್ದೇಶಗಳಿಗಾಗಿ ಸಕ್ಷಮ ಅಧಿಕಾರಿಯೆಂದು ನೇಮಿಸಬಹುದು; ಮತ್ತು

(ಬಿ) ಆ ಅಧಿನಿಯಮದಲ್ಲಿ ಮತ್ತು ಆ ನಿಯಮಗಳಲ್ಲಿ "ಸಾರ್ವಜನಿಕ ಆವರಣಗಳಿಗೆ" ಮಾಡಿದ ಉಲ್ಲೇಖಗಳನ್ನು ಪ್ರಾಧಿಕಾರದ ಆವರಣಗಳಿಗೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು ಮತ್ತು ಆ ಅಧಿನಿಯಮದ 6, 7, 8, 14, 15, 16 ಮತ್ತು 17ನೇ ಪ್ರಕರಣಗಳಲ್ಲಿ "ರಾಜ್ಯ ಸರ್ಕಾರಕ್ಕೆ' ' ಮಾಡಿದ ಉಲ್ಲೇಖಗಳನ್ನು ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖಗಳೆಂದು ಭಾವಿಸತಕ್ಕದ್ದು.

**24. ಪ್ರಾಧಿಕಾರದ ಅನುಮತಿ ಇಲ್ಲದೆ ಯಾವುದೇ ಇತರ ಪ್ರಾಧಿಕಾರ ಅಥವಾ ವ್ಯಕ್ತಿಯು ಅಭಿವೃದ್ಧಿಯನ್ನು ಕೈಗೊಳ್ಳತಕ್ಕದ್ದಲ್ಲ.**- (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ವಜ್ಞ ಕ್ಷೇತ್ರದೊಳಗೆ ಪ್ರಾಧಿಕಾರವು ಕಾಲಕಾಲಕ್ಕೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದ ಅಂಥ ಮಾದರಿಗಳ ಯಾವುದೇ ಅಭಿವೃದ್ಧಿಯನ್ನು ಪ್ರಾಧಿಕಾರದ ಪೂರ್ವಾನುಮತಿಯ ಹೊರತು, ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು ಕೈಗೊಳ್ಳತಕ್ಕದ್ದಲ್ಲ.

(2) ಸರ್ವಜ್ಞ ಕ್ಷೇತ್ರದೊಳಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಅಭಿವೃದ್ಧಿ ಕೈಗೊಳ್ಳಲು, ಅಂಥ ಅಭಿವೃದ್ಧಿಗಾಗಿ ಪ್ರಾಧಿಕಾರವು ಅನುಮತಿಯನ್ನು ನೀಡಿದ್ದ ಹೊರತು, ಯಾವುದೇ ಸ್ಥಳೀಯ ಪ್ರಾಧಿಕಾರವು ಅನುಮತಿಯನ್ನು ನೀಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಭಿವೃದ್ಧಿಯನ್ನು ಕೈಗೊಳ್ಳಲು ಇಚ್ಛಿಸುವ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು, ಅಂಥ ಅಭಿವೃದ್ಧಿಯನ್ನು ಕೈಗೊಳ್ಳಲು ಅನುಮತಿಯನ್ನು ಕೋರಿ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) ಪ್ರಾಧಿಕಾರವು, ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ತಾನು ವಿಧಿಸುವುದು ಸೂಕ್ತವೆಂದು ಭಾವಿಸಬಹುದಾದ ಅಂಥ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ ಅಂಥ ಅನುಮತಿಯನ್ನು ನೀಡಬಹುದು ಅಥವಾ ಅಂಥ ಅನುಮತಿಯನ್ನು ನೀಡಲು ನಿರಾಕರಿಸಬಹುದು.

(5) (4)ನೇ ಉಪಪ್ರಕರಣದ ಅಡಿಯಲ್ಲಿಯ ಪ್ರಾಧಿಕಾರದ ತೀರ್ಮಾನದಿಂದ ಬಾಧಿತವಾದ ಯಾವುದೇ ಪ್ರಾಧಿಕಾರ ಅಥವಾ ವ್ಯಕ್ತಿಯು, ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಂಥ ತೀರ್ಮಾನದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು, ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಅಂಥ ಅಪೀಲನ್ನು ಸಲ್ಲಿಸುವ ಬಾಧಿತ ಪ್ರಾಧಿಕಾರವು, ಕೇಂದ್ರ ಸರ್ಕಾರದ ಆಡಳಿತಾತ್ಮಕ ನಿಯಂತ್ರಣದಲ್ಲಿದ್ದರೆ, ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಅಪೀಲನ್ನು ತೀರ್ಮಾನಿಸತಕ್ಕದ್ದು.

**25. ಪ್ರಾಧಿಕಾರವು ಪ್ರವಾಸೋದ್ಯಮಕ್ಕೆ ಮತ್ತು ಯಾತ್ರೆಗೆ ಉತ್ತೇಜನವನ್ನು ನೀಡುವುದು**.- ಈ ಪಾರಂಪರಿಕ ತಾಣಗಳಿಗೆ ವ್ಯಾಪಕ ಪ್ರಚಾರವನ್ನು ನೀಡಲು ಪ್ರವಾಸೋದ್ಯಮ, ಸಾಂಸ್ಕೃತಿಕ, ಐತಿಹಾಸಿಕ ಮತ್ತು ಯಾತ್ರಾ ಪ್ರಾಮುಖ್ಯತೆಯನ್ನು ಉತ್ತೇಜಿಸುವುದಕ್ಕಾಗಿ ಪ್ರಾಧಿಕಾರವು ಕಾರ್ಯಕ್ರಮಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ಆಯೋಜಿಸಬಹುದು. ಅಂಥ ಕಾರ್ಯಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು,-

(ಎ) ಸರ್ವಜ್ಞ ಜಯಂತ್ಯೋತ್ಸವ;

(ಬಿ) ಸರ್ವಜ್ಞ ಸಾಹಿತ್ಯೋತ್ಸವ;

(ಸಿ) ಕಲಾ ಪ್ರದರ್ಶನಗಳು ಮತ್ತು ಮಾರಾಟಗಳು;

(ಡಿ) ಸಮ್ಮೇಳನಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು; ಮತ್ತು

(ಇ) ವಾರ್ಷಿಕ ಜಾತ್ರೆಗಳು ಮತ್ತು ವಿಶೇಷ ಸ್ವರೂಪದ ಉತ್ಸವಗಳು.

**26. ಅಧಿಕಾರಗಳ ಪ್ರತ್ಯಾಯೋಜನೆ**.- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, 41ನೇ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಯಾವುದೇ ಇತರ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಬಹುದು.

(2) ಪ್ರಾಧಿಕಾರವು, 42ನೇ ಪ್ರಕರಣದ ಅಡಿಯಲ್ಲಿ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ

ತನಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಆಯುಕ್ತರಿಗೆ ಅಥವಾ ಪ್ರಾಧಿಕಾರದ ಇತರ ಅಧಿಕಾರಿಗಳಿಗೆ ವಿನಿಯಮಗಳ ಮೂಲಕ, ಪ್ರತ್ಯಾಯೋಜಿಸಬಹುದು.

## ಅಧ್ಯಾಯ – IV
## ಹಣಕಾಸು ಮತ್ತು ಸ್ವತ್ತು

**27. ಪ್ರಾಧಿಕಾರದ ನಿಧಿ**.– (1) ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನಿಧಿಯೆಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಸದರಿ ನಿಧಿಗೆ,–

(I) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮಿತವಾದ ಅಥವಾ ನಿಗಮಿತವಲ್ಲದ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಸಹಾಯಧನಗಳು, ದೇಣಿಗೆಗಳು ಮತ್ತು ಕೊಡುಗೆಗಳನ್ನು;

(II) ಪ್ರಾಧಿಕಾರವು ಸಾಲ ಪಡೆದ ಮೊಬಲಗನ್ನು; ಮತ್ತು

(III) ಯಾವುದೇ ಮೂಲದಿಂದಾಗಲಿ, ಪ್ರಾಧಿಕಾರವು ಅಥವಾ ಪ್ರಾಧಿಕಾರದ ಪರವಾಗಿ ಪಡೆದುಕೊಂಡ ಇತರ ಎಲ್ಲಾ ಮೊತ್ತಗಳನ್ನು,

– ಜಮೆ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು ನಿಧಿಗೆ ಜಮೆ ಮಾಡಲಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ರಾಜ್ಯ ಸರ್ಕಾರದ ಖಜಾನೆಯಲ್ಲಿ ಹೂಡತಕ್ಕದ್ದು.

(4) ಪ್ರಾಧಿಕಾರದ ಆಯುಕ್ತರಿಗೆ ಮತ್ತು ಇತರ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನವೇನಾದರೂ ಇದ್ದಲ್ಲಿ ಅವನ್ನೂ ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**28. ನಿಧಿಯ ಬಳಕೆ**.– ಪ್ರಾಧಿಕಾರವು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ನಿಧಿಯನ್ನು ಮತ್ತು ಎಲ್ಲ ಸ್ವತ್ತನ್ನು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಬಳಸಿಕೊಳ್ಳತಕ್ಕದ್ದು.

**29. ರಾಜ್ಯ ಸರ್ಕಾರದಿಂದ ಅನುದಾನ**.– ಪ್ರಾಧಿಕಾರವು ತನ್ನದೇ ಸಂಪನ್ಮೂಲಗಳಿಂದ ಸ್ವಯಂ ನಿರ್ವಹಣೆ ಮಾಡಿಕೊಳ್ಳುವ ಹಂತವನ್ನು ತಲುಪುವವರೆಗೆ ಅದರ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತವನ್ನು ಅನುದಾನದ ರೂಪದಲ್ಲಿ ರಾಜ್ಯ ಸರ್ಕಾರವು ಪ್ರತಿ ವರ್ಷವೂ ಪ್ರಾಧಿಕಾರಕ್ಕೆ ನೀಡತಕ್ಕದ್ದು.

**30. ಪ್ರಾಧಿಕಾರದ ಆಯವ್ಯಯ.**- (1) ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ ಮುಂಬರುವ ಏಪ್ರಿಲ್ ಒಂದನೆಯ ದಿನಾಂಕದಂದು ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ಆದಾಯ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಪ್ರಾಧಿಕಾರವು ಪ್ರತಿ ವರ್ಷವೂ ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸತಕ್ಕದ್ದು. ಪ್ರಾಧಿಕಾರವು, ಅವಶ್ಯವಾದರೆ, ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಪೂರಕ ಆಯವ್ಯಯ ಅಂದಾಜುಗಳನ್ನು ಸಹ ಸಿದ್ಧಪಡಿಸಬಹುದು.

(2) ರಾಜ್ಯ ಸರ್ಕಾರವು ಈ ಆಯವ್ಯಯ ಅಂದಾಜುಗಳನ್ನು ಮತ್ತು ಪೂರಕ ಆಯವ್ಯಯ ಅಂದಾಜುಗಳನ್ನು ಅವುಗಳಲ್ಲಿ ಮಾರ್ಪಾಡುಗಳನ್ನು ಮಾಡಿ ಅಥವಾ ಮಾಡದೇ ಅನುಮೋದಿಸತಕ್ಕದ್ದು.

(3) ಅತ್ಯಂತ ತುರ್ತು ಸಂದರ್ಭದಲ್ಲಿ ಆಯುಕ್ತನು, ಒಂದು ಹಣಕಾಸು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗೆ ಮೀರದಂತೆ ವೆಚ್ಚವನ್ನು, ಅಂತಹ ವೆಚ್ಚವನ್ನು (2)ನೇ ಉಪಪ್ರಕರಣದಡಿ ರಾಜ್ಯ ಸರ್ಕಾರವು ಅನುಮೋದಿಸಿದ ವಾರ್ಷಿಕ ಅಥವಾ ಪೂರಕ ಆಯವ್ಯಯ ಅಂದಾಜಿನಲ್ಲಿ ಸೇರಿಸಿಲ್ಲದಿದ್ದಾಗ್ಯೂ ಮಾಡಲು ಸಕ್ಷಮನಾಗಿರತಕ್ಕದ್ದು.

(4) ಆಯುಕ್ತನು, ಒಂದು ಬಾರಿಗೆ ಗರಿಷ್ಠ ಒಂದು ಲಕ್ಷ ರೂಪಾಯಿಗಳಿಗೆ ಒಳಪಟ್ಟು ವೆಚ್ಚದ ಒಂದು ಘಟಕದಿಂದ ಇನ್ನೊಂದು ಘಟಕಕ್ಕೆ, ನಿಧಿಗಳ ಪುನರ್ ವಿನಿಯೋಗ ಮಾಡುವ ಅಧಿಕಾರವನ್ನೂ ಹೊಂದಿರತಕ್ಕದ್ದು.

**31. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- (1) ಆಯುಕ್ತನು, ನಿಯಮಿಸಬಹುದಾದ ಅಂಥ ಲೆಕ್ಕಪತ್ರಗಳ ಪುಸ್ತಕಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು ನಿಯಮಿಸಲಾದ ವಿಧಾನದಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಣೆಯನ್ನು ತಯಾರಿಸತಕ್ಕದ್ದು.

(2) ಪ್ರಾಧಿಕಾರದ ಹಣಕಾಸು ವರ್ಷವು ಪ್ರತಿ ಕ್ಯಾಲೆಂಡರ್ ವರ್ಷದ ಏಪ್ರಿಲ್ 1ನೇ ದಿನಾಂಕದಂದು ಪ್ರಾರಂಭವಾಗತಕ್ಕದ್ದು ಮತ್ತು ಮುಂಬರುವ ಕ್ಯಾಲೆಂಡರ್ ವರ್ಷದ ಮಾರ್ಚ್ 31ನೇ ದಿನದಂದು ಕೊನೆಗೊಳ್ಳತಕ್ಕದ್ದು.

(3) ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿಯಂತ್ರಣಾಧಿಕಾರಿಯು ವಾರ್ಷಿಕವಾಗಿ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನಡೆಸತಕ್ಕದ್ದು. ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಸಮವರ್ತಿ ಮತ್ತು ವಿಶೇಷ ಲೆಕ್ಕಪರಿಶೋಧನೆಗಾಗಿಯೂ ಸಹ ಆದೇಶಿಸಬಹುದು.

(4) ಲೆಕ್ಕಪರಿಶೋಧಕನು, ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು.

(5) ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಪ್ರಾಧಿಕಾರವು, ತನ್ನ ಸಭೆಯಲ್ಲಿ ಅದನ್ನು

ಪರಿಶೀಲಿಸತಕ್ಕದ್ದು ಮತ್ತು ಲೆಕ್ಕಪರಿಶೋಧಕನು ಮಾಡಿದ ಟೀಕೆಗಳೇನಾದರೂ ಇದ್ದಲ್ಲಿ, ಅದಕ್ಕೆ ನೀಡಿದ ತನ್ನ ವಿವರಣೆಯನ್ನು ಮತ್ತು ಲೆಕ್ಕಪರಿಶೋಧಕನು ಸೂಚಿಸಿದ ಅಕ್ರಮತೆಗಳು ಅಥವಾ ಲೋಪದೋಷಗಳೇನಾದರೂ ಇದ್ದಲ್ಲಿ, ಅವುಗಳ ಪರಿಹಾರೋಪಾಯಕ್ಕಾಗಿ ಪ್ರಾಧಿಕಾರವು ಕೈಗೊಂಡ ಕ್ರಮದ ವಿವರಣೆಯೊಂದಿಗೆ ವಾರ್ಷಿಕ ಲೆಕ್ಕಪತ್ರಗಳ ವಿವರಣೆಯ ಹಾಗೂ ಲೆಕ್ಕಪರಿಶೋಧಕನ ವರದಿಯ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ರಾಜ್ಯ ಸರ್ಕಾರವು, ಲೆಕ್ಕ ಪರಿಶೋಧಕನ ವರದಿಯನ್ನು ಮತ್ತು (5)ನೇ ಉಪಪ್ರಕರಣದ ಅಡಿಯಲ್ಲಿ ತನಗೆ ಸಲ್ಲಿಸಲಾದ ಇತರ ದಸ್ತಾವೇಜುಗಳನ್ನು ಪರಿಶೀಲಿಸಿದ ತರುವಾಯ ತಾನು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**32. ವರದಿಗಳು**.- (1) ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ, ತನ್ನ ಕಾರ್ಯನಿರ್ವಹಣೆ ಬಗ್ಗೆ ವಾರ್ಷಿಕ ವರದಿಯೊಂದನ್ನು ತಯಾರಿಸತಕ್ಕದ್ದು ಮತ್ತು 31ನೇ ಪ್ರಕರಣದ ಅಡಿಯಲ್ಲಿ ಇತರ ವರದಿಗಳೊಂದಿಗೆ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ದಿನಾಂಕಕ್ಕಿಂತ ಮೊದಲು, ಅಂಥ ನಮೂನೆಯಲ್ಲಿ ಮತ್ತು ಅಂಥ ಮಧ್ಯಂತರಗಳಲ್ಲಿ ನಿಯಮಿಸಲಾದ ವರದಿಗಳನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅಂಥ ವರದಿಗಳನ್ನು ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ V
## ಸಂಕೀರ್ಣ

**33. ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಭೂಮಿಯನ್ನು ಮಾರಾಟ ಮಾಡಕೂಡದು**.- ಪ್ರಾಧಿಕಾರವು, ತನ್ನ ವ್ಯಾಪ್ತಿಯೊಳಗಿನ ಯಾವುದೇ ಭೂಮಿಯನ್ನು ಸರ್ಕಾರದ ಪೂರ್ವಾನುಮೋದನೆ ಪಡೆಯದ ಹೊರತು, ಯಾವುದೇ ಉದ್ದೇಶಕ್ಕಾಗಿ ಮತ್ತು ಯಾವೊಬ್ಬ ವ್ಯಕ್ತಿಗೆ ಮಾರಾಟ ಮಾಡತಕ್ಕದ್ದಲ್ಲ.

**34. ಕೆಲವು ವ್ಯಕ್ತಿಗಳು ಲೋಕನೌಕರರಾಗಿರತಕ್ಕದ್ದು**.- ಪ್ರಾಧಿಕಾರದ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತೀಯ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರು ಎಂಬುದಾಗಿ ಭಾವಿಸತಕ್ಕದ್ದು.

**35. ಸದ್ಭಾವನೆಯಲ್ಲಿ ಕೈಗೊಂಡ ಕ್ರಮದ ರಕ್ಷಣೆ**.- ಈ ಅಧಿನಿಯಮದ ಅಡಿಯಲ್ಲಿ, ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ, ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**36. ಕರ್ತವ್ಯ ನಿರ್ವಹಣೆಯಲ್ಲಿ ಲೋಪ.**- (1) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಲಾದ ಯಾವುದೇ ಕರ್ತವ್ಯದ ನಿರ್ವಹಣೆಯಲ್ಲಿ ಪ್ರಾಧಿಕಾರವು ಲೋಪ ಮಾಡಿದೆ ಎಂದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾದರೆ, ಆ ಕರ್ತವ್ಯದ ನಿರ್ವಹಣೆಗಾಗಿ ಅದು ಒಂದು ಅವಧಿಯನ್ನು ನಿಗದಿಪಡಿಸತಕ್ಕದ್ದು.

(2) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಅದರ ಕರ್ತವ್ಯ ನಿರ್ವಹಣೆಗಾಗಿ ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಪ್ರಾಧಿಕಾರವು ವಿಫಲವಾದರೆ ಅಥವಾ ನಿರ್ಲಕ್ಷ್ಯ ತೋರಿದರೆ, ಪ್ರಾಧಿಕಾರಕ್ಕೆ ಲೋಪಗಳನ್ನು ಸರಿಪಡಿಸಲು ನಿರ್ದೇಶನ ನೀಡುವುದು ಸರ್ಕಾರಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು.

**37. ಪ್ರಾಧಿಕಾರದ ವಿಘಟನೆ.**- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ, ಪ್ರಾಧಿಕಾರವು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು:

ಪರಂತು, ಅಂಥ ಯಾವುದೇ ಘೋಷಣೆಯನ್ನು, ಆ ಅಭಿಪ್ರಾಯದ ಒಂದು ಗೊತ್ತುವಳಿಯನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಿ ಅವುಗಳು ಅದನ್ನು ಅನುಮೋದಿಸಿದ ಹೊರತು, ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ,-

(ಎ) ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಾಗತಕ್ಕ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ವಸೂಲಿ ಮಾಡಬಹುದಾಗಿರತಕ್ಕದ್ದು.

(ಬಿ) ಪ್ರಾಧಿಕಾರದ ವಿರುದ್ಧ ಜಾರಿಮಾಡಬಹುದಾದ ಎಲ್ಲ ಹೊಣೆಗಾರಿಕೆಗಳು, ರಾಜ್ಯ ಸರ್ಕಾರದಲ್ಲಿ ನಿಹಿತವಾದ ಮತ್ತು ಅದರಿಂದ ವಸೂಲಿಯಾದ ಸ್ವತ್ತು, ನಿಧಿ ಮತ್ತು ಬಾಕಿಗಳಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ವಿರುದ್ಧ ಜಾರಿಯಾಗಬಹುದಾಗಿರತಕ್ಕದ್ದು.

**38. ರಾಜ್ಯ ಸರ್ಕಾರದಿಂದ ನಿಯಂತ್ರಣ.**- (1) ಪ್ರಾಧಿಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರದ ಆಯುಕ್ತರ ಅಥವಾ ಪ್ರಾಧಿಕಾರದ ಅಧೀನದ ಯಾವೊಬ್ಬ ಅಧಿಕಾರಿಯ ಯಾವುವೇ ನಡವಳಿಗಳ ದಾಖಲೆಗಳನ್ನು, ಅಂಥ ನಡವಳಿಗಳ ಯಥಾರ್ಥತೆ, ಕಾನೂನು ಬದ್ಧತೆ ಅಥವಾ ಔಚಿತ್ಯಗಳ ಬಗ್ಗೆ ತಾನು ಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ತರಿಸಿಕೊಳ್ಳಬಹುದು ಮತ್ತು ಅವುಗಳ ಬಗ್ಗೆ ತಾನು ಸೂಕ್ತವೆಂದು ಭಾವಿಸಿದ ಅಂಥ ಆದೇಶವನ್ನು ಹೊರಡಿಸಬಹುದು.

**39. ನಿರ್ದೇಶನಗಳನ್ನು ನೀಡುವುದಕ್ಕೆ ರಾಜ್ಯ ಸರ್ಕಾರದ ಅಧಿಕಾರ**.- ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು ಮತ್ತು ಅಂಥ ನಿರ್ದೇಶನಗಳನ್ನು ಪಾಲಿಸುವುದು ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**40. ತೊಂದರೆಗಳ ನಿವಾರಣೆ**.- ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ತಾನು ಅವಶ್ಯಕ ಮತ್ತು ಯುಕ್ತವೆಂದು ಅಭಿಪ್ರಾಯಪಡುವಂಥ ಉಪಬಂಧಗಳನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಮಾಡಬಹುದು:

ಪರಂತು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**41. ನಿಯಮಗಳ ರಚನಾಧಿಕಾರ**.- (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಸಿಂಧುತ್ವಕ್ಕೆ ಪೂರ್ವಾಗ್ರಹವಾಗಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**42. ವಿನಿಯಮಗಳ ರಚನಾಧಿಕಾರ**.- ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು 41ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಈ ಅಧಿನಿಯಮದ

ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

**ಅನುಸೂಚಿ**

**[2ನೇ ಪ್ರಕರಣದ (ಜೆ) ಖಂಡವನ್ನು ಮತ್ತು 19ನೇ ಪ್ರಕರಣವನ್ನು ನೋಡಿ]**

**ಸರ್ವಜ್ಞ ಕ್ಷೇತ್ರ, ಪಾರಂಪರಿಕ ಕೇಂದ್ರಗಳು ಮತ್ತು ಸ್ಮಾರಕಗಳು**

| ಸಂಖ್ಯೆ | ತಾಣಗಳು |
|---|---|
| 1 | ಅಬಲೂರು |
| 2 | ಮಾಸೂರು |
| 3 | ಹಿರೇಕೆರೂರು |
| 4 | ಪ್ರಾಧಿಕಾರದ ಅಭಿಪ್ರಾಯದಲ್ಲಿ ಮೇಲಿನ ತಾಣಗಳಿಗೆ ಸಂಪರ್ಕವನ್ನು ಕಲ್ಪಿಸುವ ಹಾವೇರಿ ಜಿಲ್ಲೆಯಲ್ಲಿನ ಇತರ ತಾಣಗಳು |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 50

(2025ರ ಸೆಪ್ಟೆಂಬರ್ ತಿಂಗಳ 9ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ**, **202**5

(2025ರ ಸೆಪ್ಟೆಂಬರ್ ತಿಂಗಳ 9ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2020 (2020ರ ಕರ್ನಾಟಕ ಅಧಿನಿಯಮ ಸಂಖ್ಯೆ 38)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ**;**

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2020 (2020ರ ಕರ್ನಾಟಕ ಅಧಿನಿಯಮ 38)ರ, 3ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿರುವ (ಎ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಮುಖ್ಯಮಂತ್ರಿ ಅಥವಾ ಕಂದಾಯ ಮಂತ್ರಿ ಅಥವಾ ಮುಖ್ಯಮಂತ್ರಿಯವರು ಆಯ್ಕೆ ಮಾಡಿದ ಯಾವುದೇ ಇತರ ಮಂತ್ರಿ - ಪದನಿಮಿತ್ತ ಅಧ್ಯಕ್ಷರು"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.